Reg. No. | | | | | | | | | |

**BBMKAL 153**

# Credit Based II Semester B.B.M. Degree Examination, Nov./Dec. 2015
## (Semester Scheme) (2013-14 Onwards)
## KANNADA
### ಕನ್ನಡ ಭಾಷಾ ಪತ್ರಿಕೆ – II
### (2013-2014 ಬ್ಯಾಚ್ ಮತ್ತು ನಂತರದವರಿಗಾಗಿ)

Time : 3 Hours                                                                 Max. Marks : 80

**ಭಾಗ – 1 (ಕಾವ್ಯ)**                                                  **(35 ಅಂಕಗಳು)**

I. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಉದಾತ್ತ ದುರ್ಯೋಧನನ ಪಾತ್ರವನ್ನು ರನ್ನನ ಕಾವ್ಯಭಾಗದ ಹಿನ್ನೆಲೆಯೊಂದಿಗೆ ವಿವರಿಸಿರಿ.

2) 'ನಾಗವ್ವ' ಜನಪದ ಕಥನ ಕವನದ ದುರಂತ ಚಿತ್ರಣವನ್ನು ವಿಶ್ಲೇಷಿಸಿರಿ.

ಆ) ಕೆಳಗಿನ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಅಕ್ಕನ ವಚನಗಳಲ್ಲಿ ಕಂಡುಬರುವ ಶರಣ ಭಕ್ತಿಯ ವೈಶಿಷ್ಟ್ಯವನ್ನು ವಿವರಿಸಿರಿ.

2) ಹರೆಯದ ಮನಸ್ಸುಗಳ ಒಲವಿನ ಅನಂತ ಬಯಕೆಯನ್ನು ವಿಜಯ ನಾರಸಿಂಹ ಹೇಗೆ ಬಣ್ಣಿಸಿದ್ದಾರೆ ?

ಇ) ಎರಡಕ್ಕೆ ಮಾತ್ರ ಟಿಪ್ಪಣಿ ಬರೆಯಿರಿ : **(2×3=6)**

1) ವೈದೇಹಿ

2) ಪಾರಿಜಾತ

3) ದುಶ್ಯಾಸನ.

Shri Dharmasthala Manjunatheshwara
College of Business Management Library
MANGALORE - 575 003

II. ಅ) ಒಂದು ಪದ್ಯದ ಸಂದರ್ಭ ಸೂಚಿಸಿ, ಮಹತ್ತ್ವವನ್ನು ವಿವೇಚಿಸಿರಿ : **(1×5=5)**

1) ಪಲರಿರ್ದು ಕಾದಿದರ್ ಮೇಯ್
ಗಲಿಗಳ್ ತನ್ನೊಂದೆ ಮೆಯ್ಯಾಳಂ ತವೆ ಕೊಂದಯ್

ಪಲರುಂ ನಿನ್ನಂ ಪೆತ್ತಳ್
ಮೊಲೆವೆತ್ತಳೆ ವೀರಜನನಿವೆಸರಂ ಪೆತ್ತಳ್

P.T.O.

2) ಬಯಕೆಯು ಅನಂತ ಮುಖದಲಿ ಹೊಮ್ಮಿ
ಚಿಮ್ಮುವ ಆನಂದ ಕಾಲ।
ಬಗೆ ಬಗೆ ಬಣ್ಣದ ಕಾಮನಬಿಲ್ಲು
ಎಲ್ಲೆಡೆ ಕಾಣುವ ಕಾಲ।

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ನಿನ್ನಯ ಕೂರ್ಮೆಗವುದೆನ್ನ ಸೌಧರ್ಮಿಕೆಗಂ.

2) ಮೂಗಿಲ್ಲದಂಗೆ ಕನ್ನಡಿಯ ತೋರಲೇಕೆ ?

3) ನವಿಲುಗರಿಯಂತಿರಿಸಿ ಮಲಗಿದೆ ಮೌನ.

III. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು ಪದ** ಅಥವಾ **ಒಂದು ವಾಕ್ಯ**ದಲ್ಲಿ ಉತ್ತರಿಸಿರಿ : **(5×1=5)**

1) ಕವಿ ಚಕ್ರವರ್ತಿಗಳು ಯಾರು ?

2) ಚೆನ್ನಮಲ್ಲಿಕಾರ್ಜುನ ಯಾರ ಅಂಕಿತನಾಮ ?

3) ವೈದೇಹಿಯವರ ಮೂಲ ಹೆಸರೇನು ?

4) ಪಾರಿಜಾತವನ್ನು ಭೂಲೋಕಕ್ಕೆ ತಂದವರು ಯಾರು ?

5) ವಿಷ್ಣುವಿನ ವಾಹನ ಯಾವುದು ?

## ಭಾಗ – 2 (ಗದ್ಯ) (25 ಅಂಕಗಳು)

IV. ಅ) **ಒಂದಕ್ಕೆ** ಮಾತ್ರ ಉತ್ತರಿಸಿರಿ : **(1×8=8)**

1) 'ಬಡತನ ಅಭಿವೃದ್ಧಿ ಮಾಧ್ಯಮ' ಈ ಲೇಖನದಲ್ಲಿ ಭಾರತದ ಹಳ್ಳಿಗರ ಬದುಕನ್ನು ಮತ್ತು ದೇಶದ ವ್ಯವಸ್ಥೆಯನ್ನು ಲೇಖಕರು ಹೇಗೆ ವಿವೇಚಿಸಿದ್ದಾರೆ ? ವಿವರಿಸಿರಿ.

2) ನೇಮಿಚಂದ್ರರ ಲೇಖನದಲ್ಲಿ ನೀರು ಸಕಲ ಕಲ್ಯಾಣಕ್ಕೂ ಮೂಲ ಎಂಬುದನ್ನು ಬದುಕಿಗೆ ಅದು ಅವಶ್ಯ ಎಂಬುದನ್ನು ಹೇಗೆ ವಿಶ್ಲೇಷಿಸಿದ್ದಾರೆ ? ವಿವರಿಸಿರಿ.

ಆ) **ಒಂದಕ್ಕೆ** ಮಾತ್ರ ಉತ್ತರಿಸಿರಿ : **(1×8=8)**

1) 'ಜೇಡನ ಬಲೆ' ಲೇಖನದಲ್ಲಿ ಎಚ್ಚೆಸ್ಕೆ ಹೇಗೆ ಜೀವನ ದರ್ಶನವನ್ನು ತೆರೆದಿಟ್ಟಿದ್ದಾರೆ ?

2) ದಿನಗೂಲಿಗೆ ದುಡಿದವಳ ಕೋಟಿ ಕೋಟಿ ಸಾಹಸಿಗಳ ಸಾಹಸದ ಕಥೆಯನ್ನು ಸಂಗ್ರಹವಾಗಿ ವಿವರಿಸಿರಿ.

V. **ಒಂದಕ್ಕೆ** ಮಾತ್ರ ಉತ್ತರಿಸಿರಿ : **(1×5=5)**

1) ಖಾಸಗೀತನವನ್ನು ಸುಖಿಸುವ ಬೆಕ್ಕು ಮಾನವನ ಒಂಟಿತನವನ್ನು ನಿವಾರಿಸುವ ಆಪ್ತಸಂಗಾತಿ ಹೇಗೆ ?

2) ಆಫೀಸ್ ಬಾಯ್ ಆಗಿದ್ದವನು ಉದ್ಯೋಗದಾತನಾದ ಕಥೆ ಹೇಗೆ ? ವಿವರಿಸಿರಿ.

VI. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು ಪದ** ಅಥವಾ **ಒಂದು ವಾಕ್ಯ**ದಲ್ಲಿ ಉತ್ತರಿಸಿರಿ : **(4×1=4)**

1) ಕೊಳ್ಳುಬಾಕ ಸಂಸ್ಕೃತಿ ಎಂದರೇನು ?

2) ಓತಿಕ್ಯಾತ ಯಾವ ಜಾತಿಗೆ ಸೇರಿದ ಪ್ರಾಣಿ ?

3) ಯಾವ ಖಂಡದಲ್ಲಿ ಮಾತ್ರ ಜೇಡಗಳು ಇರುವುದಿಲ್ಲ ?

4) 'ಇಳಿದು ಬಾ ತಾಯೆ' – ಇದು ಯಾರ ಕೃತಿ ?

Shri Dharmasthala Manjunatheshwara College of Business Management Library MANGALORE - 575 003

## ಭಾಗ – 3 (ನಾಟಕ) **(20 ಅಂಕಗಳು)**

VII. ಅ) **ಒಂದಕ್ಕೆ** ಮಾತ್ರ ಉತ್ತರಿಸಿರಿ : **(1×8=8)**

1) ಕುಂತಿ ಕರ್ಣನ ಶವವನ್ನು ಹುಡುಕುತ್ತಾ ರೋಧಿಸುವ ಸನ್ನಿವೇಶ ನಾಟಕದಲ್ಲಿ ಹೇಗೆ ಚಿತ್ರಿಸಿದೆ ?

2) 'ಶ್ಮಶಾನ ಕುರುಕ್ಷೇತ್ರ' ನಾಟಕದ ದುರಂತಪ್ರಜ್ಞೆ, ಪ್ರತಿಮಾ ಸೃಷ್ಟಿಯ ಕುರಿತು ಸಂಗ್ರಹವಾಗಿ ವಿವರಿಸಿರಿ.

ಆ) **ಒಂದಕ್ಕೆ** ಉತ್ತರಿಸಿರಿ : **(1×6=6)**

1) ನಾಟಕದಲ್ಲಿ ಕಂಡು ಬರುವ ದುರ್ಯೋಧನನ ಪಾತ್ರವನ್ನು ಚಿತ್ರಿಸಿರಿ.

2) 'ವಿನಾಶದ ಗರ್ಭದಲ್ಲಿ ವಿನೂತ ಸೃಷ್ಟಿ ಇದೆ' ಎಂಬ ಸಂದೇಶವನ್ನು ಕುವೆಂಪುರವರ ನಾಟಕ ಹೇಗೆ ನಿರೂಪಿಸಿದೆ ?

VIII. **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×2=4)**

1) ಕೋಪವೆಂಬ ಮದ್ಯಪಾನದಿಂದ ಏರಿದ ಕೆಚ್ಚು

2) ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ.

3) ಕರ್ಣನನ್ ಎನ್ನೊಡನೆ ಚಿತೆಯಲ್ಲಿ ಬೆಳ್ದಪೆಯಾ ?

IX. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದೊಂದು ಪದ** ಅಥವಾ ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ ?

2) ಬಾನುಮತಿಯ ಗಂಡನ ಹೆಸರೇನು ?

---